ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ–೪ಎ<br>Part – IVA | ಬೆಂಗಳೂರು, ಬುಧವಾರ, ೧೦, ಡಿಸೆಂಬರ್,೨೦೨೫ ( ಮಾರ್ಗಶಿರಾ,೧೯, ಶಕವರ್ಷ, ೧೯೪೭)<br>BENGALURU, WEDNESDAY, 10, DECEMBER, 2025 (MARGASHIRA, 19, SHAKAVARSHA, 1947) | ನಂ.೭೯೫<br>No. 795 |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಎಂಟನೇ ಅಧಿವೇಶನ**

## ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–68)**

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965(1965ರ ಕರ್ನಾಟಕ ಅಧಿನಿಯಮ 15)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965 (1965ರ ಕರ್ನಾಟಕ ಅಧಿನಿಯಮ 15)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ, (4)ನೇ ಖಂಡದ, (iii)ನೇ ಉಪಖಂಡದಲ್ಲಿ "ಐವತ್ತಕ್ಕಿಂತ ಹೆಚ್ಚಿನ ವ್ಯಕ್ತಿಗಳನ್ನು" ಎಂಬ ಪದಗಳ ಬದಲಾಗಿ "ಹತ್ತು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. ಪ್ರಕರಣ 7ಎ ತಿದ್ದುಪಡಿ.-** ಮೂಲ ಅಧಿನಿಯಮದ, 7ಎ ಪ್ರಕರಣದ, (3)ನೇ ಉಪಪ್ರಕರಣದಲ್ಲಿ, "ಚೆಕ್, ಕ್ರಾಸು ಮಾಡಿದ ಡಿಮ್ಯಾಂಡ್ ಡ್ರಾಫ್ಟ್ ಮೂಲಕ" ಎಂಬ ಪದಗಳಿಗೆ,

ಬದಲಾಗಿ “ನೆಟ್ ಬ್ಯಾಂಕಿಗ್ ಅಥವಾ ರಾಷ್ಟ್ರೀಯ ವಿದ್ಯುನ್ಮಾನ ನಿಧಿಗಳ ವರ್ಗಾವಣೆ (NEFT) ಅಥವಾ ರಿಯಲ್-ಟೈಮ್ ಗ್ರಾಸ್ ಸೆಟಲ್‌ಮೆಂಟ್ (RTGS) ಅಥವಾ ಏಕೀಕೃತ ಪಾವತಿಗಳ ಸಂಪರ್ಕ ವ್ಯವಸ್ಥೆ (UPI) ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ” ಎಂಬ ಪದಗಳು, ಆವರಣಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

**4. ತೊಂದರೆಗಳನ್ನು ನಿವಾರಿಸುವ ಅಧಿಕಾರ**.- (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2)ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನಗಳ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965 (1965ರ ಕರ್ನಾಟಕ ಅಧಿನಿಯಮ 15)ನ್ನು ಈ ಮುಂದಿನವುಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಕಾರ್ಯಸಂಸ್ಥೆಯಲ್ಲಿರುವ ಉದ್ಯೋಗಿಗಳ ಸಂಖ್ಯೆಯನ್ನು ಐವತ್ತು ವ್ಯಕ್ತಿಗಳಿಂದ ಹತ್ತು ವ್ಯಕ್ತಿಗಳಿಗೆ ನಿರ್ದಿಷ್ಟಪಡಿಸುವುದು; ಮತ್ತು

(ii) ಮಂಡಲಿಗೆ ವಂತಿಗೆಯನ್ನು ನೀಡುವ ಕಾರ್ಯವಿಧಾನದಲ್ಲಿ ಇ-ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಆನ್‌ಲೈನ್ ಬ್ಯಾಂಕಿಂಗ್ ಅನ್ನು ಪರಿಚಯಿಸುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಸಂತೋಷ್ ಎಸ್. ಲಾಡ್**
ಕಾರ್ಮಿಕ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

# ಅನುಬಂಧ
## ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ
## (1965ರ ಕರ್ನಾಟಕ ಅಧಿನಿಯಮ 15) ಉದ್ಧೃತ ಭಾಗ

**XXX XXX XXX**

**2. ಪರಿಭಾಷೆ:-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

**XXX XXX XXX**

(4) "ಕಾರ್ಯ ಸಂಸ್ಥೆ" ಎಂದರೆ;-

(i) ಒಂದು ಕಾರ್ಖಾನೆ;

(ii) ಮೋಟಾರ್ ದೊಡ್ಡ ಬಾಡಿಗೆ ಬಸ್ ಸೇವೆ;

(iii) ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮೇರೆಗೆ, ನೋಂದಾಯಿತವಾದ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ಸಂಘ ಮತ್ತು ಧರ್ಮಾರ್ಥ ಅಥವಾ ಇತರ ನ್ಯಾಸಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಸಹಾಯಕವಾದ ಯಾವುದೇ ವ್ಯವಹಾರ ಅಥವಾ ವ್ಯಾಪಾರ ಅಥವಾ ಯಾವುದೇ ಕೆಲಸವನ್ನು ನಡೆಸುತ್ತಿರುವಂಥ ಮತ್ತು ಐವತ್ತಕ್ಕಿಂತ ಹೆಚ್ಚಿನ ವ್ಯಕ್ತಿಗಳನ್ನು ನಿಯೋಜಿಸಿಕೊಂಡಿರುವಂಥ ಅಥವಾ ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಯಾವುದೇ ಕೆಲಸದ ದಿವಸದಂದು ಅವರನ್ನು ನಿಯೋಜಿಸಿ ಕೊಂಡಿದ್ದಂಥ ಅದಕ್ಕೆ ಅನ್ವಯವಾಗುವ ಯಾವುದೇ ಕಾನೂನಿನ ಮೇರೆಗೆ ನೋಂದಾಯಿತವಾಗಿರಲಿ ಅಥವಾ ಇಲ್ಲದಿರಲಿ ಆ ಧರ್ಮಾರ್ಥ ಅಥವಾ ಇತರ ನ್ಯಾಸವನ್ನು ಒಳಗೊಂಡ ಯಾವುದೇ ಕಾರ್ಯ ಸಂಸ್ಥೆ, ಆದರೆ ಇದು, ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರದ (ಕಾರ್ಖಾನೆಯಾಗಿಲ್ಲದ) ಕಾರ್ಯ ಸಂಸ್ಥೆಯನ್ನು ಒಳಗೊಳ್ಳುವುದಿಲ್ಲ ಮತ್ತು;

(iv) ಯಾವುದೇ ನೆಡುತೋಪು ಅಥವಾ ಕಾರ್ಯಾಗಾರಗಳು;

**XXX XXX XXX**

**7ಎ. ವಂತಿಗೆ.-** (1) ಕಾರ್ಯ ಸಂಸ್ಥೆಯಲ್ಲಿರುವ ಪ್ರತಿಯೊಬ್ಬ ನಿಯೋಜಿತನಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ, ನಿಯೋಜಕ, ನಿಯೋಜಿತ ಮತ್ತು ರಾಜ್ಯ ಸರ್ಕಾರದಿಂದ ಸಂದಾಯವಾಗಬೇಕಾದ ನಿಯೋಜಕನ ವಂತಿಗೆ, ನಿಯೋಜಿತರ ವಂತಿಗೆ ಮತ್ತು ರಾಜ್ಯ ಸರ್ಕಾರದ ವಂತಿಗೆ, ಇವುಗಳನ್ನು ಒಳಗೊಂಡ ವಂತಿಗೆಯನ್ನು ಮಂಡಲಿಗೆ, ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ವಂತಿಗೆಗಳು ಆ ನಿಧಿಯ ಭಾಗವಾಗತಕ್ಕದ್ದು.

(2) ಯಾವುದೇ ವರ್ಷದ ಡಿಸೆಂಬರ್ 31 ರಂದು ಕಾರ್ಯ ಸಂಸ್ಥೆಯ ರಿಜಿಸ್ಟರಿನಲ್ಲಿ ಹೆಸರು ಇರುವ ಪ್ರತಿಯೊಬ್ಬ ನಿಯೋಜಿತನಿಗೆ ಸಂಬಂಧಿಸಿದಂ , ಸಂಬಂಧಪಟ್ಟ ನಿಯೋಜಿತ ಮತ್ತು ರಾಜ್ಯ ಸರ್ಕಾರವು ಆ ವರ್ಷಕ್ಕಾಗಿ ಒಂದು ರೂಪಾಯಿ, ಎರಡು ರೂಪಾಯಿಗಳು ಅಥವಾ ಒಂದು ರೂಪಾಯಿಯ ಮೊತ್ತವನ್ನು ಅನುಕ್ರಮವಾಗಿ ವಂತಿಗೆಯೆಂದು ಸಂದಾಯ ಮಾಡತಕ್ಕದ್ದು.

(3) ಯಾವುದೇ ವರ್ಷಕ್ಕೆ ಸಂಬಂಧಿಸಿದಂತೆ ನಿಯೋಜಕನ ವಂತಿಗೆ ಮತ್ತು ನಿಯೋಜಿತನ ವಂತಿಗೆಯನ್ನು ನಿಯೋಜಕನು ಮುಂಬರುವ ವರ್ಷದ ಜನವರಿ 15ರಂದು ಅಥವಾ ಅದಕ್ಕೆ ಮುಂಚೆ ಚೆಕ್, ಮನಿಆರ್ಡರ್ ಮೂಲಕ ಅಥವಾ ನಗದು ರೂಪದಲ್ಲಿ ಮಂಡಲಿಗೆ ಸಂದಾಯ ಮಾಡತಕ್ಕದ್ದು ಮತ್ತು ವಂತಿಗೆಯನ್ನು ಜಮೆ ಮಾಡುವುದರ ವೆಚ್ಚಗಳನ್ನು ನಿಯೋಜಕನು ಸ್ವತಃ ಭರಿಸತಕ್ಕದ್ದು.

**XXX XXX XXX**

## KARNATAKA LEGISLATIVE ASSEMBLY

**SIXTEENTH LEGISLATIVE ASSEMBLY**

**EIGHTH SESSION**

# THE KARNATAKA LABOUR WELFARE FUND (AMENDMENT) BILL, 2025

**(LA Bill No. 68 of 2025)**

A Bill further to amend the Karnataka Labour Welfare Fund Act, 1965.

Whereas it is expedient further to amend the Karnataka Labour Welfare Fund Act, 1965 (Karnataka Act 15 of 1965) for the purposes herein after appearing:

Be it enacted by the Karnataka State Legislature in the Seventy sixth year of the Republic of India as follows:-

**1. Short title and commencement.-** (1) This Act may be called the Karnataka Labour Welfare Fund (Amendment) Act, 2025.

(2) It shall come into force at once.

**2. Amendment of section 2.-** In the Karnataka Labour Welfare Fund Act, 1965 (Karnataka Act 15 of 1965) (hereinafter referred to as the Principal Act), in section 2, in clause (4), in sub-clause (iii) for the words “more than fifty persons”, the words “ten or more persons”, shall be substituted.

**3. Amendment of section 7A.-** In the Principal Act, in section 7A, in sub-section (3), for the words “cheque or by crossed demand draft” the words, brackets and letters “online payment channels i.e., Net banking or National Electronic Funds Transfer (NEFT) or Real Time Gross Settlement (RTGS) or Unified Payments Interface (UPI) or demand draft”, shall be substituted.

**4. Power to remove difficulties.-** (1) If any difficulty arises in giving effect to the provisions of this Act, the Government may, by order published in the Official Gazette, make such provisions, not inconsistent with the provisions of this Act, as may appear to it to be necessary for removing the difficulty:

Provided that, no such order shall be made under this section after the expiry of a period of two years from the date of commencement of this Act.

(2) Every order made under this section shall be laid as soon as may be after it is made, before each house of the State Legislature.

## STATEMENT OF OBJECTS AND REASONS

It is considered necessary further to amend the Karnataka Labour Welfare Fund Act, 1965 (Karnataka Act 15 of 1965) to,-

(i) specify the number of employees from fifty persons to ten persons in the Establishment; and

(ii) introduce e-banking system and online banking in the procedure of contribution to the Board.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**SANTOSH S LAD**
MINISTER FOR LABOUR

**M.K. VISHALAKSHI**
Secretary
Karnataka Legislative Assembly

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ANNEXURE

**Extract from the Karnataka Labour Welfare Fund Act, 1965**
**(Karnataka Act 15 of 1965)**

**XXX XXX XXX**

**2. Definitions.-** In this Act, unless the context otherwise requires,-

**XXX XXX XXX**

(4) "establishment" means,-

(i) a factory;

(ii) motor omnibus service;

(iii) any establishment including a society registered or deemed to be registered under the Karnataka Societies Registration Act, 1960, and a charitable or other trust, whether registered under any law applicable to such charitable or other trust or not, which carries on any business or trade or any work in connection with or ancillary thereto and which employs or on any working day during the preceding twelve months employed more than fifty persons, but does not include an establishment (not being a factory) of the Central or any State Government; and

(iv) any plantation or workshops;

**XXX XXX XXX**

**7A. Contribution.-** (1) In respect of every employee in an establishment there shall be paid contribution to the Board comprising the employer's contribution, employee's contribution and State Government's contribution, payable respectively by the employer, the employee and the State Government and the contributions so paid shall form part of the Fund.

(2) In respect of every employee whose name stands in the register of an establishment on 31st December of a year sum of fifty rupees, one hundred rupees and fifty rupees respectively shall be payable as contribution for that year by the concerned employee, the employer and the State Government.

(3) The employer's contribution and the employee's contribution in respect of a year shall be paid by the employer to the Board on or before 15th January of the following year by cheque, or by crossed demand draft and the expenses of remitting the contribution shall be borne by the employer himself.

**XXX XXX XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH